ಗಂಡಗುಬ್ಬಿಗೆ ಏನೋ ಹೊಳೆದು ಈಗ ಬಂದೆ ಅಂತ ಹಾರಿಹೋಗುತ್ತೆ. ಹೆಂಡತಿ ಗುಬ್ಬಿ 'ಥೂ, ಇವರು ಕರುದ್ರು ಅಂತ ನಾನೂ ಹೋದ್ನಲ್ಲ. ನನ್ನ ಬುದ್ಧಿಗೇನಾಗಿತ್ತು' ಅಂತ ಕಂದಾ ಅಂತ ಅಳ್ತದೆ.

ಅಷ್ಟೊತ್ತಿಗೆ ಗಂಡಗುಬ್ಬಿ ಮೈನಾ, ಕಾಗೆ, ಮಿಂಚುಳ್ಳಿ, ಪಾರಿವಾಳ, ಚೋರೆಹಕ್ಕಿ ಅಮೇಲೆ ಇನ್ನೂ ಬೇರೆಬೇರೆ ಗುಬ್ಬಿಗಳನ್ನೆಲ್ಲಾ ಕರ್ಕೊಬಂದು, 'ಲೇಲಮ್ಮಾ ಲೈಸಾ' ಅಂತ ಇಡೀ ಬಲೇನಾ ಕೊಕ್ಕಲ್ಲಿ ಎತ್ಕೊಂಡು ಹಾರಿ ಸ್ಪೀಡಾಗಿ ಹೋಗಿಬಿಡ್ತವೆ.

ಹೆಂಡತಿ ಗುಬ್ಬಿ 'ಅಯ್ಯೋ ಕಂದ' ಅಂತ ಅವರ ಹಿಂದೆ ಹಾರಿಹೋಗುತ್ತೆ.

ಅದಕ್ಕೂ ಮೊದಲೇ ಗಂಡಗುಬ್ಬಿ ದೂರದ ಬೆಟ್ಟದ ಬುಡದಲ್ಲಿರೋ ಇಲಿಯಣ್ಣನ ಜೊತೆಗೆ ಮಾತಾಡ್ಕಂಡು ಬಂದಿರುತ್ತೆ. ಬಲೇನ ನೀಟಾಗಿ ಕಟ್ ಮಾಡ್ಕೊಟ್ಟು ಹಿರೇಮಗನ್ನ ಜೀವ ಉಳಿಸ್ಕೊಡಬೇಕು ಅಂತ.

ಅಮ್ಮ ಅಲ್ಲಿ ಹೋಗೋಷ್ಟರಲ್ಲಿ ಇಲಿಯಣ್ಣನ ಕೆಲಸ ಮುಗೀತಾ ಬಂದಿರುತ್ತೆ. ಕೊನೆ ತುಂಡು ಕತ್ತರಿಸಿ ಗುಬ್ಬಿಮರೀನಾ ಆಚೆಗೆ ಕರ್ಕೊಬಂದು 'ತಗಳಿ ನಿಮ್ಮ ಮಗೀನ್ನಾ' ಅಂತ ಅವ್ವ ಅಪ್ಪಂಗೆ ಒಪ್ಪುತ್ತೆ ಇಲಿಯಣ್ಣ.

ಆಗ ಗಂಡ ಗುಬ್ಬಿ ಬಲೆ ಹೊತ್ತುತಂದ ಎಲ್ಲಾ ಜಾತಸ್ಥರಿಗೆ ಥ್ಯಾಂಕ್ಸ್ ಅಂತ ಹೇಳಿ 'ನಿಮ್ಮೆಲ್ಲರ ಸಹಕಾರದಿಂದ ಮಗ ಉಳ್ಕತು' ಅಂತ ಕೈಮುಗಿಯುತ್ತೆ.

'ಓ... ಅದೆಲ್ಲಾ ಏನ್ ಬುಡಿ ಗುಬ್ಬಣ್ಣ, ನೆರೆಕೆರೆ ಅಂದಮೇಲೆ ಒಬ್ರಿಗೊಬ್ರು ಆಗದೆ ಇದ್ರೆ ಹೆಂಗೆ. ಮಗೀನ್ನಾ ಚೆನ್ನಾಗಿ ನೋಡ್ಕ... ಸುಸ್ತಾಗಿದೆ ಅದ್ಕೆ' ಅಂತ ಹೇಳಿ ಅವೆಲ್ಲಾ ಪುರ್ ಅಂತ ಹಾರ್ಹೋಗ್ತವೆ.

ನನ್ ಕಂದ ಅಂತೆಲ್ಲಾ ಮುದ್ದಾಡಿದ ಹೆಂಡತಿ ಗುಬ್ಬಿ, ಇಲಿಯಣ್ಣನ್ನ 'ನಮ್ಮನೆಗೆ ಒಂದಿನ ಲಂಚಿಗೆ ಬರಬೇಕು ನೀವು ನಿಮ್ಮ ಕುಟುಂಬ ಎಲ್ಲ' ಅಂತ ಕರಿಯುತ್ತೆ.

ಇಲಿಯಣ್ಣ, 'ಓ ಅದಕ್ಕೇನಂತೆ ಬರೋಣಾ... ಆದರೆ ಅಲ್ಲಿ ಎಲ್ಲೂ ಬೆಕ್ಕ ಮಾಮಾ ಇಲ್ಲ ತಾನೇ..? 'ಇರಲ್ಲ ಬಿಡಿ. ನೀವೂ ಬೆಕ್ಕು ಬರದೇ ಇರೋ ಜಾಗದಲ್ಲೇ ಮನೆ ಮಠ ಮಾಡ್ಕೊಂಡಿರ್ತೀರಾ... ನನ್ ಬುದ್ಧಿಗಿಷ್ಟು...' ಅಂತ ಹೇಳ್ದಾಗ ನಕ್ಕು ಗುಬ್ಬಿ ದಂಪತಿ ಪ್ರೀತಿಯಿಂದ ಇಲಿಗೆ ಹಗ್ ಮಾಡಿ, 'ಥ್ಯಾಂಕ್ಯೂ ಅಂದರೆ ಕಡಿಮೆ ಆಗುತ್ತೆ. ಬೈ... ಸ್ನೇಹ ಇರಲಿ. ಮನೆಗೆ ಬನ್ನಿ... ಕಾಯ್ತಿರ್ತೀವಿ' ಅಂತ ಶೇಕ್ ಹ್ಯಾಂಡ್ ಮಾಡಿ, ಹೆಂಡತಿ ಮಗನ್ನ ಕರ್ಕೊಂಡು ಗೂಡಿಗೆ ವಾಪಾಸು ಹಾರಿ ಬಂದು ಮಕ್ಕಳಿಗೆ ತಂದಿದ್ದ ತಿಂಡಿ, ಗೊಂಬೆ, ಫ್ರಾಕು ಕೊಟ್ಟು – 'ರೆಕ್ಕೆ ಬಲಿಯೋ ಮೊದಲೇ ಹಾರಾಡಲಿಕ್ಕೆ ಹೋಗಬಾರದು. ಅಣ್ಣ ಬಲೆಯೊಳಗೆ ಸಿಕ್ಕಿದ್ದು ನೋಡಿದ್ರಲ್ವಾ ಮಕ್ಕಳೇ.?' ಅಂತ ಮಕ್ಕಳಿಗೆ ಪ್ರೀತಿಯಿಂದ ತಿಳಿವಳಿಕೆ ಹೇಳುತ್ತೆ.

ಮುಂದೆ ಎಲ್ಲಾ ಜೋಪಾನವಾಗಿ ಸುಖವಾಗಿರ್ತವೆ. ■



ಚಿತ್ರ: ವಿಜಯಕುಮಾರಿ

# ವಿನಾಶಕಾಲೇ ವಿಪರೀತ ಬುದ್ಧಿ

■ **ಮಹಾಂತೇಶ ಬಾಗೇವಾಡಿ**

ಒಂದು ವಿಶಾಲವಾದ ಕಾಡು. ಅಲ್ಲಿ ಅಪಾರ ಪ್ರಾಣಿಗಳ ಜೊತೆಯಲ್ಲಿ ನಾಗರಹಾವು ಇತ್ತು. ಆ ಹಾವಿಗೆ ತಾನು ಈ ಕಾಡಿನ ರಾಜ ನಾಗಬೇಕು. ಎಂದು ಆಶೆ ಚಿಗುರಿತು. 'ನಾನು ವಿಷ ಜಂತು ನನ್ನ ಕೆಣಕಿದರೆ ನಿಮಗೆ ಉಳಿಗಾಲವಿಲ್ಲ' ಎಂದು ಕಾಡಿನ ಪ್ರಾಣಿಗಳನ್ನು ಹೆದರಿಸಲು ಪ್ರಾರಂಭಿಸಿತು. ಈ ವಿಷಯ ಪ್ರಸ್ತುತ ಕಾಡಿನರಾಜ ಸಿಂಹಕ್ಕೆ ತಿಳಿಯಿತು.

ನಾಗರಹಾವು ಮೊದಲೇ ವಿಷ ಜಂತು ಅದರೊಟ್ಟಿಗೆ ವಿರೋಧ ಮಾಡಿಕೊಂಡರೆ ಕಚ್ಚಿದರೆ ವಿಷವೇರಿ ತನ್ನ ಕಥೆ ಮುಗಿಯುತ್ತದೆ. ಏನುಮಾಡುವುದು ಚಿಂತಿಸತೊಡಗಿತು. ಹೀಗಿರುವಾಗ ಕಾಡಿನ ಪ್ರಾಣಿಗಳಿಗೆ ನಾಗರಹಾವು ತಲೆನೋವಾಯಿತು. ಅದರ ಬೆದರಿಕೆಗೆ ಹೆದರಿ ಚುನಾವಣೆ ನಡೆಸಲು ಒಪ್ಪಿಕೊಳ್ಳುವ ಬಗ್ಗೆ ತೀರ್ಮಾನಿಸಲು ಪೂರ್ವಭಾವಿ ಸಭೆ ನಡೆಯಿತು. ಆ ಸಭೆಗೆ ನರಿ ಗೈರಾಯಿತು. ಎಲ್ಲ ಕಾಡುಪ್ರಾಣಿಗಳಿಗಳ ಕುತೂಹಲ ನರಿ, ನಾಗರಹಾವಿನ ವಿರೋಧ ಕಟ್ಟಿಕೊಳ್ಳುವದೇ ಅಂತಾ ಕೊನೆ ಕ್ಷಣದಲ್ಲಿ ನರಿ ಬಂದಿತು.

ಆಗ ಅಲ್ಲಿಗೆ ನಾಗರಹಾವು ಬಂದು ಏನು ನಿರ್ಧಾರ ಮಾಡಿದ್ದೀರಿ ನೀವು ಅಂದಾಗ ಅವರು ಒಪ್ಪಿಗೆ ಸೂಚಿಸಿ ನಾಗರಹಾವನ್ನೆ ಕಾಡಿನ ರಾಜನನ್ನಾಗಿ ಮಾಡಬೇಕೆಂದು ಎಲ್ಲರೂ ಸಜ್ಜಾದಾಗ, ನರಿ ನಾಗರಾಜ ಈ ಕಾಡಿಗೆ ನೀನು ರಾಜನಾಗುತ್ತಿ ಆದರೆ ನಮ್ಮೆಲ್ಲರನ್ನು ಹೆದರಿಸಿದಂತೆ ನನ್ನ ಗೆಳೆಯ ಮಿಂಚುಹುಳುವನ್ನು ಹೆದರಿಸು ಯಾಕೆಂದರೆ, 'ನಿನ್ನ ನಾಗಮಣಿ ಬೆಳಕಿಗಿಂತಲೂ ಅದರ ಬೆಳಕು ತುಂಬಾ ಅಂದವಾಗಿದೆ'. ಅಂದಾಗ ನಾಗರಾಜನ ಹೊಟ್ಟೆಯೊಳಗೆ ಹೊಟ್ಟೆಕಿಚ್ಚು ಶುರುವಾಯಿತು.

ಇಡೀ ಕಾಡಿನ ಪ್ರಾಣಿಗಳನ್ನು ಹೆದರಿಸಿದ ನನಗೆ ಮಿಂಚುಹುಳುವನ್ನು ಹೆದರಿಸುವುದು. ದೊಡ್ಡ ಮಾತಲ್ಲ ಅಂತಾ ಬಿಗಿತು.

ನರಿ, ನಾಗರಹಾವಿನ ಮನಸ್ಥಿತಿ ನೋಡಿ ಒಳಗೊಳಗೆ ತನ್ನ ಉಪಾಯ ಫಲಿಸಿತು, ಅಂತಾ ಖುಷಿಪಡುತ್ತಿತ್ತು. ನಾಗರಹಾವು ಮಿಂಚುಹುಳುವಿನ ಹತ್ತಿರ ಹೋಗಿ ಅದನ್ನು ಕಚ್ಚಲು ಹೋದಾಗ, ನಾಗರಾಜ ಯಾಕೆ? ನನ್ನ ಹಿಂದೆ ಬಂದಿರುವೆ ಅಂದಾಗ 'ನಿನ್ನ ಬೆಳಕು ನನ್ನ ನಾಗಮಣಿ ಬೆಳಕಿಗಿಂತಲೂ ಅಂದವಾಗಿದೆ' ಅದನ್ನು ನನ್ನಿಂದ ಸಹಿಸಲು ಆಗುತ್ತಿಲ್ಲ. ನಿನ್ನ ಕೊಲ್ಲಲು ಬಂದಿರುವೆ ಅದರಿಂದ ನಾನು ಈ ಕಾಡಿನ ರಾಜನಾಗುತ್ತೇನೆ. ಅಂತಾ ಗರ್ವದಿಂದ ದರ್ಪ ತೋರಿತು. ನಿನ್ನ ಈ ಸಹಿಸದ ಗುಣವೇ ನಿನ್ನ ವಿನಾಶವಾಗುತ್ತದೆ. ನಿನಗೆ ಈ ಭೂಮಿ ಮೇಲೆ ದೊಡ್ಡ ಗೌರವವಿದೆ. ನೀನು ಯಾರದೊ ಮಾತನ್ನು ಕೇಳಿ ಬಂದಿರುವೆ ನನ್ನಂತಹ ಸಣ್ಣ ಜೀವಿಸಾಯಿಸಿ ನೀನು ಕಾಡಿಗೆ ರಾಜನಾಗಲು ಬಂದಿರುವೆ ಬೇಡ ಅಂದರೂ ಕೇಳಲಿಲ್ಲ.

ಮಿಂಚುಹುಳ ಮುಳ್ಳಿನ ಪೊದೆಯೊಳಗೆ ಮರೆಯಾಯಿತು. ಹಾವು ಮುಳ್ಳು ಇರುವುದನ್ನು ಗಮನಿಸದೆ ಹಾಗೆ ನುಗ್ಗೇ ಬಿಟ್ಟಿತು. ಒಂದು ಕಣ್ಣಿಗೆ ಮುಳ್ಳು ಚುಚ್ಚಿತು. ಬಾಯಿಗೂ ಮುಳ್ಳು ಚುಚ್ಚಿಗಾಯವಾದಾಗ ನಾಗರಹಾವಿಗೆ ಅರಿವಾಯಿತು. ನಾನು ನರಿಮಾತನ್ನು ಕೇಳಿ ನನಗೆ ವಿನಾಶ ತಂದುಕೊಂಡೆ ಅಂದುಕೊಳ್ಳುವಷ್ಟರಲ್ಲಿ ನರಿ ಸಮೇತ ಕಾಡಿನ ಪ್ರಾಣಿಗಳು ಅಲ್ಲಿಗೆ ಬಂದಾಗ, ನಾಗರಹಾವು ತಲೆ ಎತ್ತಲು ಆಗಲಿಲ್ಲ. ಸೋಲಿನಿಂದ ಕಂಗೆಟ್ಟು ಹೋಗಿತ್ತು. ಅಂದಿನಿಂದ ನಾಗರಹಾವು ಒಳ್ಳೆಯತನದಿಂದ ಕಾಡಿನ ಎಲ್ಲ ಪ್ರಾಣಿಗಳೊಂದಿಗೆ ಸಹಬಾಳ್ವೆ ನಡೆಸಿತು. ನೀತಿ: ಕಾಲಬಂದಾಗ ಸ್ವಲ್ಪ ಯೋಚಿಸಿ ನಿರ್ಧಾರ ತೆಗೆದುಕೊಳ್ಳಬೇಕು. ■